ಸೌಡಿಯನ್ನು ನೇಮಕಮಾಡಿ ಹಂಚಿಕೆ ವ್ಯವಸ್ಥೆಯನ್ನು ಬದಲಾಯಿಸಬೇಕೆಂದು ಹೇಳುವುದು ಅಷ್ಟು ಸೂಕ್ತವಲ್ಲ. ಆದ್ದರಿಂದ ಒತ್ತಾಯ ಮಾಡಬಾರದೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಸರ್ಕಾರ ಈ ಕಾರ್ಯ ಕೈಕೊಂಡರೆ ಅಷ್ಟು ಚೆನ್ನಾಗಿ ಮಾಡುವುದಕ್ಕಾಗು ವುದಿಲ್ಲವೆಂದು ಉತ್ತರಕೊಟ್ಟ ಹಾಗೆ ಕಾಣುತ್ತದೆ. ಇದು ಉಚಿತವಾದ ಅಭಿಪ್ರಾಯವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಿರ್ಣಯದ ಅಭಿಪ್ರಾಯ ಅವರು ಸರಿಯಾಗಿ ತಿಳಿದುಕೊಂಡಿದ್ದರೆ ಈ ರೀತಿ ಪ್ರಶ್ನೆ ಮಾಡುತ್ತಿರಲ್ಲಿಲ್ಲ. ನಾಲೆಗಳು ಸರ್ಕಾರದ ವಶದಲ್ಲಿದ್ದು ರೆವೆನ್ಯೂ ಇಲಾಖೆ ಅಡಳಿತದಲ್ಲವೆ. ತೋಟಿ ತಳವಾರರು ರೆವೆನ್ಯೂ ಅಧಿಕಾರಿಗಳ ಹತೋಟಿಯಲ್ಲಿ ದ್ದಾರೆ. ಪಟೇಲ ಶ್ಯಾನುಭೋಗರೂ ಸಹ ರೆವೆನ್ಯೂ ಇಲಾಖೆಗೆ ಸಂಬಂಧಪಟ್ಟವರು. ಆದ್ದರಿಂದ ಇವರು ಜನರ ಹತೋಟಿಯಲ್ಲಿಲ್ಲ. ಸರ್ಕಾರದ ಇಲಾಖೆಯ ಹತೋಟಿಯಲ್ಲಿಯೇ ಇದ್ದಾರೆ. ಏನಾದರೂ ಈಗಿರುವ ವ್ಯವಸ್ಥೆಯಲ್ಲಿ ಲೋಪದೋಷಗಳಿದ್ದರೆ ಸರಿಪಡಿಸ ಬಹುದು. ಖರ್ಚುಮಾಡಿದ ಮಾತ್ರಕ್ಕೆಯೇ ಕೆಲಸವಾಗು ವುದಿಲ್ಲ. ಇರುವ ಪದ್ಧತಿ ಬದಲಾಯಿಸಿ ಸಂಬಳ ಕೊಟ್ಟು ಕೆಲಸ ಮಾಡಿಸಿದರೆ ಹೊರೆಯೂ ಜಾಸ್ತಿಯಾಗು ವ ದಲ್ಲದೆ ಕೆಲಸವೂ ಸಮರ್ಪಕವಾಗಿ ಆಗುವುದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಅಚ್ಚುಕಟ್ಟು ದಾರರು ತಾವು ಕಂದಾಯ ಹೆಚ್ಚಾಗಿ ಕೊಡುವುದಕ್ಕೆ ಒಪ್ಪಿದರೆ ಸರ್ಕಾರದವರು ವಹಿಸಿಕೊಳ್ಳುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾವುದೋ ಒಂದು ಭಾವನೆಯಿಂದ ಒಪ್ಪಿದರೆ ಅನುಕೂಲವಾಗ ಬಹುದೆಂಬ ಊಹೆಯ ಮೇಲೆ ರೈತರು ಒಪ್ಪಬಹುದು. ನಂದರ್ಭಾನುಸಾರ ನೋಡಿ ಏರ್ಪಾಡು ಮಾಡೋಣ. ಆದರೆ ನನ್ನ ಅನುಭವದಂತೆ ಹಾಗೆ ರೈತರು ಮುಂದೆ ಬಂದರೆ ಭಾರ ಜಾಸ್ತಿಯಾಗುತ್ತದೆ. ಇದನ್ನು ತಾವು ಮನಗಾಣಬೇಕು.

ಶ್ರೀ ಡಿ. ಎಂ. ಗೋವಿಂದರಾಜು.—ಮಾನ್ಯ ಸಚಿವರು ಕೊಟ್ಟ ಭರವಸೆಯಮೇಲೆ ನಿರ್ಣಯವನ್ನು ವಾಪಸು ತಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The resolution was, by leave, withdrawn.

No. 4 Gowdanakatte Tank Repairs.

ಶ್ರೀ ಮೆ. ಎಂ. ಚಂದ್ರ ಶೇಖರಯ್ಯ (ಕಡೂರು).—ಸ್ವಾಮಿ, ನನ್ನ ನಿರ್ಣಯ ಈ ರೀತಿಯದೆ :—

"ಕಡೂರು ತಾಲ್ಲೂಕು, ಯಗತಿ ಹೋಬಳಿ, ಹುಲಿಗೆರೆ ಗಾ ಮದ ಹತ್ತಿರವಿರುವ ಗೌಡನಕಟ್ಟೆ ಕೆರೆಯನ್ನು ದುರಸ್ತುಮಾಡಿಸಿ ಆ ಮೂಲಕ, ಕೆರೆಯ ಕೆಳಗಿರುವ ಸುಮಾರು ಇನ್ನೂರು ಎಕರೆ ಗಳ ಜಮೀನನ್ನು ಸಾಗುವಳಿಗೆ (ನೀರಾವರಿಗೆ) ತರಲು ಅವಕಾಶ ಕಲ್ಪಿಸಬೇಕೆಂದು ಈ ಸಭೆಯ ವರು ಅಭಿಪ್ರಾಯ ಪಡುತ್ತಾರೆ."

Mr. SPEAKER.—Resolution moved :

"That this Assembly is of the opinion that the Gowdanakatte tank near Huligere village, Yagate hobli, Kadur taluk be repaired thereby bringing under irrigation about two hundred acres of land behind the tank."

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಸರ್ಕಾರದವರು ಎಸ್ಟಿಮೇಟ್ ಮಾಡಿ ಕೆರೆ ರಿಪೇರಿಮಾಡಿಸುವುದಕ್ಕೆ ಏರ್ಪಾಡುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಚ್. ಕೆ. ವೀರಣ್ಣಗೌಡ (ಪ್ರಾಮಾಣಿಕ ಶಾಖೆಯ ಸಚಿವರು).—ಇದರಲ್ಲೇನೋ ಸ್ವಲ್ಪ ವ್ಯತ್ಯಾಸವಿರುವ ಹಾಗಿದೆ. ಸರ್ಕಾರದ ಲೆಕ್ಕದಲ್ಲಿ ಶ್ರೀಮಾನ್ ಚಂದ್ರಶೇಖರಯ್ಯನವರು ಸೂಚಿಸಿರುವ ಗ್ರಾಮವೂ ಇಲ್ಲ, ಕೆರೆಯೂ ಇಲ್ಲ. ಕಡೂರು ತಾಲ್ಲೂಕಿ ನಲ್ಲಿರುವ ಗೌಡನಕಟ್ಟೆ ಅಚ್ಚುಕಟ್ಟು ನಾಲ್ಕೈದು ಎಕರೆಮಾತ್ರವಿದೆ. ಅದಲ್ಲದೆ ಕಡೂರು ತಾಲ್ಲೂಕು, ಸಿಂಗನಕೆರೆ ಹೋಬಳಿ, ಗೌಡನಕಟ್ಟೆ ಕೆರೆಯಾದರೆ ಅದು ಗಮನಾರ್ಹವಾದ ಕೆರೆ. ಮಾನ್ಯ ಸದಸ್ಯರು ನಿರ್ಣಯ ದಲ್ಲಿ ಹೇಳಿರುವ ಕೆರೆ ಟ್ಯಾಂಕ್ ರಿಜಿಸ್ಟರಿನಲ್ಲಿಯೇ ಇಲ್ಲ. ಆದ್ದರಿಂದ ವಿವರವನ್ನು ಕೊಟ್ಟರೆ ವಿಮರ್ಶೆಮಾಡಿ ಸೂಕ್ತ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಅವಕಾಶ ವಾಗುತ್ತದೆ.

The resolution was, by leave, withdrawn.

Speaker's concluding remarks.

Mr. SPEAKER.—Now it is time for us to rise. Before we rise I would prefer to make an appeal to the Hon'ble Members. It is by way of a personal appeal.

We have been sitting for the last more than ten days and we have done some good business also. On the first day when I was elected as Speaker of this House, I requested Hon'ble Members that, if there were to be any difficulties, they should come and discuss the matter with me. If I have been hard they may kindly excuse me merely for the fact that I am a man really interested in upholding the dignity and decorum of the House. In fact, I have been brought up in a different atmosphere and I also admit that I had to adjust myself here. I have tried to adjust myself to some extent but if for want of time I have not been able to do so I hope the Hon'ble Members will excuse me. My earnest desire has been that we should develop the procedure that is prevailing in the Lok Sabha and in other Assemblies including the former Mysore Assembly and develop healthy conventions and traditions.

I am conscious of the fact that I have been to some extent hard on some of the members because I had to